2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ., ಯವರ
ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರಃ 1517/2023
DW- 01

| | | |
|---|---|---|
| ಸಾಕ್ಷಿದಾರರ ಹೆಸರು | : | ಮಂಜುನಾಥ |
| ತಂದೆಯ ಹೆಸರು | : | ನಾರಾಯಣ |
| ವಯಸ್ಸು | : | 51 ವರ್ಷ |
| ಉದ್ಯೋಗ | : | ಬ್ರೋಕರ್ |
| ವಾಸ ಸ್ಥಳ | : | ಕುಂದಾಪುರ |

ದಿನಾಂಕಃ **08-07-2025** ರಂದು ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು**.**

ಮುಖ್ಯ ವಿಚಾರಣೆಃ ಶ್ರೀ ಬಿ ಆರ್ ಎನ್. ವಕೀಲರಿಂದ

ಈ ಪ್ರಕರಣದಲ್ಲಿ ನಾನು ಆರೋಪಿತನಿರುತ್ತೇನೆ. ದಿನಾಂಕ 20-06-2017 ಕ್ಕೆ 1,50,000/- ರೂ. ವನ್ನು ವ್ಯಯಕ್ತಿಕ ಸಾಲವಾಗಿ ಮಿಲಗ್ರಿಸ್ ಸೊಸೈಟಿಯಿಂದ ಪಡೆದಿರುತ್ತೇನೆ. ಇದಕ್ಕೆ ಪೂರಕವಾಗಿ 3,50,000/- 4 LIC ಬಾಂಡ್ ಗಳನ್ನು ಭದ್ರತೆಗಾಗಿ ಕೊಟ್ಟಿರುತ್ತೇನೆ. ಅದರ ಜೊತೆಗೆ 15 ಸಾವಿರ ರೂ. FD ಬಾಂಡ್ ನ್ನು ಸಹ ಅವರು ಇಟ್ಟುಕೊಂಡಿರುತ್ತಾರೆ. 2017 ರವರೆಗೆ ನಾನು ಒಂದು ಕೋ ಆಪರೇಟಿವ್ ಸೊಸೈಟಿಯಲ್ಲಿ ಕೆಲಸ ಮಾಡುತ್ತಿದ್ದೆ. 2017 ರಲ್ಲಿ ಕೆಲಸ ಕಳೆದುಕೊಂಡಿದ್ದು, ಆ ಪ್ರಕರಣ ನಡೆಯುತ್ತಿರುತ್ತದೆ. ಆದ ಕಾರಣ ನನಗೆ ಸಾಲ ತೀರಿಸಲು ಸಮಸ್ಯೆ ಆಗಿರುತ್ತದೆ. ಈ ಸಮಯದಲ್ಲಿ ಬ್ಯಾಂಕಿನವರು 2 -3 ನೋಟಿಸು ಕಳುಹಿಸಿದ್ದರು. 2017 ರಲ್ಲಿ ನಮ್ಮ ಮನೆಗೆ ರಿಕವರಿಗೆ ಬಂದಿದ್ದರು. ಆ ಸಮಯದಲ್ಲಿ ನಾನು ಮನೆಯಲ್ಲಿ ಇರಲಿಲ್ಲ. ನನ್ನ ಹೆಂಡತಿಯನ್ನು ದಬಾಯಿಸಿ 3 -4 ಚೆಕ್ ನ್ನು ತೆಗೆದುಕೊಂಡು ಹೋಗಿರುತ್ತಾರೆ. ಆ ಚೆಕ್ ಗಳು ಕೋ ಆಪರೇಶನ್ ಬ್ಯಾಂಕಿನದ್ದು ಆಗಿರುತ್ತದೆ. ಈ ಬಗ್ಗೆ ನಾನು ಠಾಣೆಯಲ್ಲಿ ದೂರನ್ನು ಸಹ ಕೊಟ್ಟಿರುತ್ತೇನೆ.

ಮಿಲಗ್ರಿಸ್ ಸೊಸೈಟಿ ಪ್ರಭಾವಿ ಸೊಸೈಟಿ ಆಗಿದ್ದರಿಂದ ನನ್ನ ಪ್ರಕರಣವನ್ನು ಗಣನೆಗೆ ತೆಗೆದುಕೊಂಡಿರುವುದಿಲ್ಲ ಹಾಗೂ ತನಿಖೆ ಮಾಡಿರುವುದಿಲ್ಲ. ಸಾಕ್ಷಿ ಪುನಃ ನನ್ನ ದೂರನ್ನು ತೆಗೆದುಕೊಂಡಿಲ್ಲ ಎಂದು ನುಡಿಯುತ್ತಾರೆ. ಆದದಾನಂತರ ನಾನು ಹಣವನ್ನು ಬ್ಯಾಂಕಿಗೆ ತೆಗೆದುಕೊಂಡು ಹೋಗಿರುತ್ತೇನೆ. ಅವರು ನಿನ್ನ ಹಣ ಬೇಕಾಗಿರುವುದಿಲ್ಲ, ನಾವು ಕೋರ್ಟಿಗೆ ಹಾಕಿರುತ್ತೇವೆ ಅಂತ ಹೇಳಿರುತ್ತಾರೆ. ಈ ಸಂದರ್ಭದಲ್ಲಿ ಕೋರೋನಾ ಇದ್ದಾಗಲೂ ಎ ಆರ್ ಕೋರ್ಟಿನಲ್ಲಿ ಪ್ರಕರಣ ಸಲ್ಲಿಸಿರುತ್ತಾರೆ. 2021 ರಲ್ಲಿ 1 LIC

ಬಾಂಡ್ ಹಾಗೂ 2023 ರಲ್ಲಿ 3 LIC ಬಾಂಡ್ ಅದನ್ನು ಪ್ರೀ ಮೆಚುರ್ ಆಗಿ ಅದನ್ನು ವಿತ್ ಡ್ರಾ ಮಾಡಿ ನನ್ನ ಅಕೌಂಟ್ ಗೆ ಹಾಕಿ ಅದನ್ನು ವಿತ್ ಡ್ರಾ ಮಾಡಿಕೊಂಡಿರುತ್ತಾರೆ. ನಾನು ಸಾಲ ತೆಗೆದುಕೊಂಡು ಕೇವಲ 10 ತಿಂಗಳ ಒಳಗಾಗಿ ಅವರು ಚೆಕ್ ಬೌನ್ಸ್ ಹಾಕಿರುತ್ತಾರೆ. ನನಗೆ ಸಾಲ ಮರುಪಾವತಿ ಮಾಡಲು 4 ವರ್ಷಗಳ ಕಾಲಾವಕಾಶ ಇರುತ್ತದೆ. ನಾನು ಚೆಕ್ ಕೊಡುವುದು ಇದ್ದಿದ್ದೆ ಆದರೆ ಇನ್ಸಾಲ್ ಮೆಂಟ್ ಗೆ ಚೆಕ್ ಕೊಡುತ್ತಿದ್ದೆ. ಪೂರ್ತಿ ಹಣಕ್ಕೆ ಚೆಕ್ ಕೊಡುತ್ತಿರಲಿಲ್ಲ ಎಂದು ನುಡಿಯುತ್ತಾರೆ. ಪೂರ್ತಿ ಚೆಕ್ ನ ಮೊತ್ತ 1,50, 893/- ರೂ. ಆಗಿರುತ್ತದೆ. 4 LIC ಬಾಂಡ್ ಮೊತ್ತ 95,442/- ರೂ. ಆಗಿರುತ್ತದೆ.FD ಹಣವನ್ನು ಸಹ ವಿತ್ ಡ್ರಾ ಮಾಡಿರುತ್ತಾರೆ. ಅದು 22,569/- ರೂ. ಆಗಿರುತ್ತದೆ. ಒಟ್ಟು 1,18,011 ರೂ. ಹಣ ನನ್ನ ಖಾತೆಗೆ ಜಮಾ ಆಗಿರುತ್ತದೆ. ಉಳಿದ ಹಣ 32,885/- ರೂ.ಗಳನ್ನು ನನ್ನ ಷೇರು ಹಾಗೂ ಡಿವಿಡೆಂಟ್ ನಲ್ಲಿ ಕ್ಲೀಯರ್ ಮಾಡಿಕೊಳ್ಳಬಹುದು ಎಂದು ನುಡಿಯುತ್ತಾರೆ.ಆದ್ದರಿಂದ ಈ ಪ್ರಕರವನ್ನು ವಜಾ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಈ ಸಂದರ್ಭದಲ್ಲಿ ದೂರುದಾರರ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

ಓದಿ ಹೇ. ಕೇ. ಸರಿ ಇದೆ. ನನ್ನ ಹೇ. ಮೇ. ಬೆ. ಮಾಡಲಾಗಿದೆ

**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾದೀಶರು**
**ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ (C/c)**